**ಓ.ಎಸ್ ನಂ. 202/2015**

**ಪಿ. ಡಬ್ಲ್ಯೂ: 1**

**ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 26–11–2025 ರಂದು ಬೊಧಿಸಲಾಯಿತು.**

**(ಸಾಕ್ಷಿದಾರರರಿಗೆ ಕನ್ನಡ ಬರುತ್ತಿಲ್ಲವಾಗಿದ್ದು ಕೊಂಕಣಿ ಭಾಷೆ ಬಲ್ಲವರಾಗಿದ್ದು ಶ್ರೀ ಪಿಜಿಪಿ ವಕೀಲರು ಸಾಕ್ಷಿ ಕೊಂಕಣಿಯಲ್ಲಿ ಹೇಳಿದ್ದನ್ನು ಕನ್ನಡದಲ್ಲಿ ತರ್ಜುಮೆ ಮಾಡಿ ಹೇಳುವುದಾಗಿ ಪ್ರಮಾಣ ವಚನ ಸ್ವೀಕರಿಸಿ ಸಾಕ್ಷಿ ಕೊಂಕಣಿಯಲ್ಲಿ ಹೇಳಿದ ಸಾಕ್ಷ್ಯವನ್ನು ಸದ್ರಿಯವರು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಿದ್ದನ್ನು ರೆಕಾರ್ಡ್ ಮಾಡಿಕೊಳ್ಳಲಾಯಿತು)**

**<u>ಮುಂದುವರಿದ ಪಾಟೀ ಸವಾಲುಃ ಶ್ರೀ ಆರ್ ಎಸ್ ಎಚ್ ಜಿ ನ್ಯಾಯವಾದಿರವರಿಂದಃ</u>**

ದಾವಾ ಶೆಡ್ಯೂಲನ ಮೂರನೇ ಕ್ರಮಾಂಕದ ಆಸ್ತಿಯು ನಾನು ಖರೀದಿ ಮಾಡಿದ ಆಸ್ತಿ ಆಗಿದ್ದು, ಅದನ್ನು 14.03.2014 ರಂದು ಓರ್ವ ಮಧುಕರ ಆಪಾ ಸೈರು ಮತ್ತು ಇತರ ಐದು ಜನರಿಂದ ಖರೀದಿ ಮಾಡಿರುತ್ತೇನೆ. ಸದರಿ ನಾನು ಖರೀದಿ ಮಾಡಿದ ದಾವಾ ಶೆಡೂಲ 3 ನೇ ಕ್ರಮಾಂಕದ ಆಸ್ತಿಯ ಕ್ಷೇತ್ರವು 1 ಗುಂಟೆ 10 ಆಣೆ ಇರುತ್ತದೆ. ಈ ಬಗ್ಗೆ ನಾನು ಕ್ರಯದಸ್ತನ್ನು ನಿಪಿ.6 ರಂತೆ ಹಾಜರು ಪಡಿಸಿರುತ್ತೇನೆ. ನಿಪಿ.6 ರ ಪ್ರಕಾರ ಎರಡು ಆಸ್ತಿಗಳನ್ನು ಖರೀದಿ ಮಾಡಿರುತ್ತೇನೆ. ಅದರಲ್ಲಿ ಸರ್ವೇ ನಂ.342/4 ಹಾಗೂ 342/17 ಇರುತ್ತದೆ. ಒಟ್ಟು 2 ಗುಂಟೆ ವಿಸ್ತೀರ್ಣದ ಜಮೀನನ್ನು ಖರೀದಿ ಮಾಡಿರುತ್ತೇನೆ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ,**

**ಸಿವಿಲ್ ನ್ಯಾಯಾಧೀಶರು ಕಾರವಾರ**